# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 175 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ. ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 14.02.2024 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| | | |
|---|---|---|
| ಅ) | ಉಡುಪಿ ಜಿಲ್ಲೆಯ ಮಲ್ಪೆ ಕಡಲ ತೀರದಲ್ಲಿ ಐಷಾರಾಮಿ ದೋಣಿಗಳ ನಿಲುಗಡೆಗಾಗಿ ಯಾರ್ಚ್ ಯಾರ್ಡ್‌ಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; | ಹೌದು.<br><br>ಉಡುಪಿ ಜಿಲ್ಲೆಯ ಮಲ್ಪೆಯ ಕಡಲ ತೀರದಲ್ಲಿ ಮರಿನಾ ಹಾಗೂ ವಿವಿಧೋದ್ದೇಶ ಬಂದರನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ವಿಸ್ತೃತ ಯೋಜನಾ ವರದಿಯನ್ನು ಕೇಂದ್ರ ಸರ್ಕಾರದ ಸಾಗರಮಾಲಾ ಕೋಶಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಸದರಿ ಯೋಜನೆಯನ್ನು ಅಭಿವೃದ್ಧಿಪಡಿಸುವ ಕುರಿತು ಖಾಸಗಿಯವರ ಆಸಕ್ತಿಯನ್ನು ಪರಿಶೀಲಿಸಲು ಸಾಗರಮಾಲಾ ಕೋಶವು ಸೂಚಿಸಿದ್ದು, ಅದರಂತೆ ಆಸಕ್ತಿ ವ್ಯಕ್ತಪಡಿಸುವಿಕೆ (Expression of Interest) ಆಹ್ವಾನಿಸಲಾಗಿ ಖಾಸಗಿಯವರಿಂದ ಯಾವುದೇ ಆಸಕ್ತಿ ವ್ಯಕ್ತವಾಗಿರುವುದಿಲ್ಲ. ಆದ್ದರಿಂದ, ಖಾಸಗಿ ಸಹಭಾಗಿತ್ವ ಮತ್ತು ಇಲಾಖೆಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಪ್ರತ್ಯೇಕಿಸಿ ಮತ್ತೊಮ್ಮೆ ಅನುಮೋದನೆಗಾಗಿ ಸಾಗರಮಾಲ ಕೋಶಕ್ಕೆ ಸಲ್ಲಿಸಲಾಗಿದೆ. ಈ ಯೋಜನೆಗೆ ಅನುಮೋದನೆ ದೊರಕಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಆ) | ಐಷಾರಾಮಿ ದೋಣಿಗಳ ನಿಲುಗಡೆಗೆ ಅವಕಾಶ ಮಾಡಿಕೊಡುತ್ತಿರುವುದರಿಂದ ಆ ಪರಿಸರದ ಮೀನುಗಾರಿಕೆಗೆ ತೊಂದರೆಯಾಗುತ್ತಿರುವುದು ಕುರಿತು ಸರ್ಕಾರದ ನಿಲುವೇನು; | ಈ ಯೋಜನೆಯನ್ನು ಎಲ್ಲಾ ಶಾಸನಬದ್ಧ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಅನುಷ್ಠಾನಗೊಳಿಸಲಾಗುವುದು.<br><br>ಪರಿಸರ ಮತ್ತು ಮೀನುಗಾರಿಕೆ ಪರಿಣಾಮಗಳ ಕುರಿತು ಪರಿಸರ ಅಧ್ಯಯನ (CRZ) ಕೈಗೊಳ್ಳಲಾಗುವುದು. ಅಧ್ಯಯನದನ್ವಯ ವರದಿಯನ್ನು ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಸದರಿ ಯೋಜನೆಯಿಂದ ಪರಿಸರದ ಮೀನುಗಾರಿಕೆಗೆ ಯಾವುದೇ ತೊಂದರೆಯುಂಟಾಗುವುದಿಲ್ಲ. |

| | | |
|---|---|---|
| ಇ) | ಈ ಐಷಾರಾಮಿ ದೋಣಿಗಳ ನಿಲುಗಡೆ ನಿಲ್ದಾಣದಿಂದ ಸರ್ಕಾರಕ್ಕೆ ಆಗುತ್ತಿರುವ ಲಾಭವೇನು; ಇದರಿಂದ ಸೃಷ್ಟಿಯಾಗುವ ಉದ್ಯೋಗಾವಕಾಶಗಳ ಸಂಖ್ಯೆ ಎಷ್ಟು; | ಈ ಯೋಜನೆಯಿಂದ ಜಲಾಧಾರಿತ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದಂತಾಗುವುದಲ್ಲದೆ ಪ್ರವಾಸೋದ್ಯಮ ಮತ್ತು ಇತರ ಪೂರಕ ಚಟುವಟಿಕೆಗಳಿಗೆ ಉಪಯೋಗವಾಗಲಿದೆ. ಇದು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆರ್ಥಿಕ ಚಟುವಟಿಕೆಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಈ ಯೋಜನೆಯಿಂದ ಸುಮಾರು 100 ಜನರಿಗೆ ಉದ್ಯೋಗಾವಕಾಶ ನೇರ ಸೃಷ್ಟಿಯಾಗಲಿದೆ. |
| ಈ) | ಮೀನುಗಾರಿಕೆಯನ್ನೇ ಕುಲ ಕಸುಬು ಮಾಡಿಕೊಂಡಿರುವ ಎಷ್ಟು ಬೆಸ್ತರು ನಿರುದ್ಯೋಗಿಗಳಾಗುತ್ತಾರೆ; ಈ ಕುರಿತು ಸರ್ಕಾರದ ನಿಲುವೇನು? | ಈ ಯೋಜನೆಯಿಂದ ಮೀನುಗಾರಿಕಾ ಉದ್ಯೋಗಕ್ಕೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಮತ್ತು ಮೀನುಗಾರಿಕೆಯನ್ನೇ ಕುಲ ಕಸುಬು ಮಾಡಿಕೊಂಡಿರುವ ಬೆಸ್ತರು ನಿರುದ್ಯೋಗಿಗಳಾಗುವುದಿಲ್ಲ. |

ಸಂಖ್ಯೆ: ಐಡಿಡಿ 16 ಬಿಎನ್ಎಸ್ 2024

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು.**

ಮಂಕಾಳ ಎಸ್. ವೈದ್ಯ
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು